# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 12(91+86) |
| ಸದಸ್ಯರ ಹೆಸರು | : | ಶ್ರೀ. ಪ್ರತಾಪ್ ಸಿಂಹ ನಾಯಕ್ ಕೆ. ಹಾಗೂ ಶ್ರೀಮತಿ. ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27.01.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಲೆನಾಡು, ಕರಾವಳಿ ಹಾಗೂ ಶಿವಮೊಗ್ಗ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆಗೆ ಎಲೆಚುಕ್ಕಿ ಕೀಟ ಭಾದೆ ಎದುರಾಗಿದ್ದು, ಅಡಿಕೆ ತೋಟಗಳಿಗೆ ಎಲೆಚುಕ್ಕಿ ರೋಗ ಕಾಣಿಸಿಕೊಂಡು, ವ್ಯಾಪಕವಾಗಿ ಮತ್ತು ಅತ್ಯಂತ ವೇಗವಾಗಿ ಹರಡಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಬೆಳೆ ನಷ್ಟವಾಗಿ ಅಡಿಕೆ ಬೆಳೆಗಾರರು ಆರ್ಥಿಕವಾಗಿ ಅತ್ಯಂತ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗಮನಕ್ಕೆ ಬಂದಿರುತ್ತದೆ.<br>ಮಲೆನಾಡು, ಕರಾವಳಿ ಹಾಗೂ ಶಿವಮೊಗ್ಗ ಭಾಗದಲ್ಲಿ ಅಂದಾಜು 88559 ಹೆಕ್ಟೇರ್ ಪ್ರದೇಶದಲ್ಲಿ ಎಲೆಚುಕ್ಕೆ ರೋಗವು ಕಂಡುಬಂದಿರುತ್ತದೆ. ವಿವರ ಕೆಳಗಿನಂತಿದೆ:- (ಕೆಳಗಿನ ಕೋಷ್ಟಕ)<br>It has been noticed. Leaf spot disease has been observed in an estimated area of 88559 hectares in Malnad, Coastal and Shivamogga regions. The details are as follows:- (table below) |
| ಆ) | ಬಂದಿದ್ದಲ್ಲಿ, ಯಾವುದೇ | ಅಡಿಕೆ ಬೆಳೆಯ ಎಲೆಚುಕ್ಕೆ ರೋಗ ನಿಯಂತ್ರಿಸಲು |

| ಕ್ರ. ಸಂ | ಜಿಲ್ಲೆಯ ಹೆಸರು | ಹಾನಿಗೊಳಗಾದ ಎಲೆಚುಕ್ಕೆ ರೋಗ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|
| 1. | ಚಿಕ್ಕಮಗಳೂರು | 25210 |
| 2. | ಶಿವಮೊಗ್ಗ | 32124 |
| 3. | ಉತ್ತರ ಕನ್ನಡ | 8730 |
| 4. | ಹಾಸನ | 360 |
| 5. | ದಕ್ಷಿಣ ಕನ್ನಡ | 20830 |
| 6. | ಉಡುಪಿ | 455 |
| 7. | ಕೊಡಗು | 850 |
| ಒಟ್ಟು | | 88559 |

| Sl No. | Districtr Name | Area affected by Areca Nut Leaf spot disease (In Hectare) |
|---|---|---|
| 1. | Chikkamagaluru | 25210 |
| 2. | Shivamogga | 32124 |
| 3. | Uttara Kannada | 8730 |
| 4. | Hassan | 360 |
| 5. | Dakshina Kannada | 20830 |
| 6. | Udupi | 455 |
| 7. | Kodagu | 850 |
| Total | | 88559 |

ಪರಿಣಾಮಕಾರಿಯಾಗದ ನಿಯಂತ್ರಣದ ಕ್ರಮಗಳನ್ನು ಸಕಾಲದಲ್ಲಿ ಕೈಗೊಳ್ಳದ ಕಾರಣದಿಂದಾಗಿ ಗಿಡಗಳು ಸಾಯುತ್ತಿದ್ದು, ಇದರಿಂದಾಗಿ ಇಡೀ ತೋಟಗಳೇ ಸಂಪೂರ್ಣವಾಗಿ ನಾಶವಾಗುತ್ತಿರುವುದನ್ನು ತಡೆಯಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು;

ತೋಟಗಾರಿಕೆ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ:

1. 2025-26 ನೇ ಸಾಲಿನಲ್ಲಿ MIDH ಮಾರ್ಗಸೂಚಿಯನ್ವಯ ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯ “Special Interventions” ಕಾರ್ಯಕ್ರಮದಡಿ ಅಡಿಕೆ ಬೆಳೆಯಲ್ಲಿ ಎಲೆಚುಕ್ಕೆ ರೋಗದ ನಿಯಂತ್ರಣ ಕಾರ್ಯಕ್ರಮದಡಿ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಪ್ರತಿ ಹೆಕ್ಟೇರಿಗೆ ತಗಲುವ ರೂ 5000/- ಗಳಲ್ಲಿ ಶೇ.30 ರಂತೆ ಪ್ರತಿ ಹೆಕ್ಟೇರಿಗೆ ರೂ.1500/- ದರದಲ್ಲಿ 2 ಹೆಕ್ಟೇರ್ ರವರೆಗೆ ರೂ.3000/- ಗಳ ಸಹಾಯಧನ ನೀಡಲಾಗುತ್ತಿದೆ. ಈ ಬಾಬ್ತು ರೂ.860.65 ಲಕ್ಷಗಳ ಅನುದಾನ ನಿಗದಿಯಾಗಿದೆ. ಈವರೆಗೂ 14115 ರೈತರಿಗೆ ರೂ.452.61 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ. ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.

2. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯಡಿ ಅಡಿಕೆ ಬೆಳೆಯು ಅಧಿಸೂಚಿತವಾಗಿದ್ದು, ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ವಿಮಾ ಪರಿಹಾರವನ್ನು ಒದಗಿಸಲಾಗುತ್ತಿದೆ.

| ಕ್ರ. ಸಂ. | 2024-2025 ನೇ ಸಾಲಿನ ಬೆಳೆ ವಿಮೆ ವಿವರ | ಅಡಿಕೆ ಬೆಳೆಯುವ ಜಿಲ್ಲೆಗಳಿಗೆ |
|---|---|---|
| 1. | ಅರ್ಜಿಗಳ ಸ್ವೀಕೃತ (ಸಂಖ್ಯೆ) | 528705 |
| 2. | ವಿಸ್ತೀರ್ಣ (Covered) ಹೆಕ್ಟೇರ್ ಗಳಲ್ಲಿ | 173060.42 |
| 3. | ವಿಮಾ ಮೊತ್ತ (Sum insured) (Amount in Lakhs) | 221517.33 |
| 4. | ಪಾವತಿಸಲಾದ ವಿಮಾ ಮೊತ್ತ (Claim amount in Lakhs) | 47254.13 |
| 5. | ಫಲಾನುಭವಿಗಳ ಸಂಖ್ಯೆ | 365920 |
| 6. | 2025-2026 ನೇ ಸಾಲಿನ ಬೆಳೆ ವಿಮೆ ಅರ್ಜಿಗಳ ಸ್ವೀಕೃತ (ಸಂಖ್ಯೆ) | 652440 |

3. ಪ್ರಸಕ್ತ ಸಾಲಿನಲ್ಲಿ ಅಡಿಕೆ ಬೆಳೆಗೆ ಬಾಧಿಸುವ ಎಲೆಚುಕ್ಕೆ ರೋಗ, ಹಳದಿ ಎಲೆ ರೋಗ ಹಾಗೂ ಕೊಳೆ ರೋಗಗಳ ನಿರ್ವಹಣೆಗಾಗಿ ಫೈಟೋಸಾನಿಟರಿ (Phytosanitory) ಕ್ರಮಗಳ ಅಳವಡಿಕೆ (ರೋಗ ಬಾಧಿತ ಸಸ್ಯದ ಭಾಗಗಳನ್ನು ತೆಗೆಯುವುದು ಮತ್ತು ನಾಶಪಡಿಸುವುದು), ಸಸ್ಯ ಸಂರಕ್ಷಣಾ ಕ್ರಮಗಳು ಹಾಗೂ ಪೋಷಕಾಂಶಗಳ ಸಮಗ್ರ ನಿರ್ವಹಣೆಗೆ ಸಹಾಯಧನಕ್ಕಾಗಿ ಒಟ್ಟಾರೆ ರೂ.57776.33 ಲಕ್ಷಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ

MIDH ಮಾರ್ಗಸೂಚಿಯನ್ವಯ ಶೇ.30 ರಷ್ಟು ಸಹಾಯಧನದಂತೆ ಒಟ್ಟು ರೂ.17332.90 ಲಕ್ಷಗಳನ್ನು (ಕೇಂದ್ರ ಪಾಲು ರೂ.10399.74 ಲಕ್ಷಗಳು ಹಾಗೂ ರಾಜ್ಯ ಪಾಲು ರೂ.6933.14 ಲಕ್ಷಗಳು) ಕೋರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

4. ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ತಜ್ಞರು ಹಾಗೂ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆಗಳ ಕುರಿತು ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಹಾಗೂ ತರಬೇತಿ/ ಕಾರ್ಯಾಗಾರಗಳ ಮೂಲಕರೈತರಿಗೆ ಅರಿವು ಮೂಡಿಸಲಾಗುತ್ತಿದೆ.

The measures taken by the Department to control leaf spot disease in the arecanut crop are as follows:

1. During the year 2025–26, as per MIDH guidelines, under the *'Special Interventions'* component of the National Horticulture Mission, in the programme for the control of leaf spot disease in arecanut for integrated management of diseases/pests and nutrients, out of the amount required in one hectare i.e. Rs. 5,000 a subsidy of 30%, i.e., Rs. 1,500 per hectare, upto 2 hectares, a subsidy of Rs. 3,000 per beneficiary is being given. A total allocation of Rs. 860.65 lakh has been earmarked. The programme is in progress, and so far, subsidy amounting to Rs. 452.61 lakh has been provided to 14,115 farmers.
2. Arecanut crop has been notified under the restructured weather-Based Crop Insurance Scheme for the monsoon and post-monsoon seasons and compensation is being provided under the said scheme in case of crop loss due to weather conditions.

| Sl. No. | Crop Insurance Details for the year 2024-2025 | For Arecanut growing districts |
|---|---|---|
| 1 | Applications received (Nos) | 528705 |
| 2 | Area (Covered) in hectares | 173060.42 |
| 3 | Sum insured (Amount in | 221517.33 |

<table>
<tr><td></td><td></td><td>
<table>
<tr><td></td><td>Lakhs)</td><td></td></tr>
<tr><td>4</td><td>Claim amount paid (Claim amount in Lakhs)</td><td>47254.13</td></tr>
<tr><td>5</td><td>Number of beneficiaries</td><td>365920</td></tr>
<tr><td>6</td><td>2025-26 year Insurance Applications received (No.)</td><td>652440</td></tr>
</table>
<br>
3. A proposal of Rs.57776.33 lakhs has been prepared for providing assistance towards the adoption of phyto sanitary measures (removal and destruction of disease-affected plant parts), plant protection measures, and integrated nutrient management for the management of leaf spot disease, yellow leaf disease and rot disease affecting arecanut crop in the State and as per MIDH guidelines 30% of this totalling to Rs.17332.90 lakhs, (Central share Rs.10399.74 lakhs and State share Rs.6933.14 lakhs) has been requested to Government of India.<br>
4. In collaboration with experts from the University of Agriculture and Horticultural Sciences, Shivamogga and Departmental officers, publicity is being carried out through manuals, pamphlets and other mass media on nutrient management of arecanut plantations, making of canals for drainage, use of green manure and supply of fertilizers and awareness is being created among the farmers through training/workshops.
</td></tr>
<tr><td>ಇ)</td><td>ಬ್ಯಾಕ್ಟೀರಿಯಾ, ಪಂಗಸ್‌ಗಳಿಂದ ಈ ರೋಗ ಕಂಡು ಬರುತ್ತಿದ್ದರೂ, ಈ ರೋಗವನ್ನು ಎಲ್ಲಾ ಕಡೆಗೆ ಹರಡಲು ಒಂದು ಸಣ್ಣದಾದ ಕೀಟ ಕಾರಣವಾಗಿದ್ದು, ಇದನ್ನು ನಿಯಂತ್ರಿಸಲು ಅಗತ್ಯ ಕ್ರಮ ವಹಿಸದಿದ್ದರೆ ಇಡೀ ಅಡಿಕೆ ಕೃಷಿಯೇ ಸಂಪೂರ್ಣವಾಗಿ ನಾಶವಾಗುವ ಸಾಧ್ಯತೆ ಇರುವುದರಿಂದ ಈ ಕುರಿತು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು;</td><td>ಅಡಿಕೆ ಎಲೆ ಚುಕ್ಕಿ ರೋಗವು ಕೀಟದಿಂದ ಹರಡುವುದಿಲ್ಲ ಗಾಳಿಯ ಮೂಲಕ ಹರಡುತ್ತದೆ. ಇದರ ನಿಯಂತ್ರಣೆಗೆ ಕೈಗೊಂಡ ಕ್ರಮಗಳ ವಿವರವನ್ನು ಮೇಲಿನ ಪ್ರಶ್ನೆ (ಆ) ಉತ್ತರದಲ್ಲಿ ನೀಡಲಾಗಿದೆ.<br>Arecanut leaf spot disease is not transmitted by insect. It spreads through air. Details of the measures taken to control leaf spot disease are given in the answer to question (A) above.</td></tr>
<tr><td>ಈ)</td><td>ಎಲೆಚುಕ್ಕೆ ರೋಗದ ನಿಯಂತ್ರಣಕ್ಕೆ ಕೂಡಲೇ ಸಂಶೋಧನಾ ಪರಿಹಾರ</td><td>ಅಡಿಕೆ ಬೆಳೆಯ ಎಲೆಚುಕ್ಕೆ ರೋಗ ನಿಯಂತ್ರಣೆಯ ಬಗ್ಗೆ ಸಂಶೋಧನೆಗಾಗಿ 2023-24ನೇ ಸಾಲಿನಲ್ಲಿ ರೂ.43.61/-</td></tr>
</table>

| | | |
|---|---|---|
| | ಕಂಡುಕೊಳ್ಳದಿದ್ದರೆ ಅಡಿಕೆ ಬೆಳೆಗಾರರು ಅತ್ಯಂತ ಸಂಕಷ್ಟದ ಪರಿಸ್ಥಿತಿಗೆ ಶಾಶ್ವತವಾಗಿ ಸಿಲುಕುವ ವಾತಾವರಣ ನಿರ್ಮಾಣವಾಗಿದ್ದು, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಲಕ್ಷಗಳನ್ನು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗ ರವರಿಗೆ ಒದಗಿಸಲಾಗಿದೆ. ರೈತರ ತಾಕುಗಳಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಸಂಶೋಧನೆಗಾಗಿ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ 8 ಪ್ರಾತ್ಯಕ್ಷತೆಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಅಧ್ಯಯನದಿಂದ ಸಮಗ್ರ ರೋಗ ನಿರ್ವಹಣೆಗಾಗಿ ಉತ್ತಮ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಸಮುದಾಯ ಮಟ್ಟದಲ್ಲಿ ಶಿಲೀಂಧ್ರ ನಾಶಕಗಳ ಸಕಾಲಿಕ ಸಿಂಪರಣೆ ಮಾಡುವುದರಿಂದ, ಶಿಲೀಂಧ್ರದ ಸೋಂಕು, ರೋಗದ ಉಲ್ಬಣ ಮತ್ತು ಹರಡುವಿಕೆಯನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆಂದು ವರದಿ ಮಾಡಲಾಗಿರುತ್ತದೆ. ಈ ಕುರಿತು ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br><br>During the year 2023–24, A grant of Rs.43.61 lakh was provided to the Keladi Shivappa Nayaka University of Agricultural and Horticultural Sciences, Shivamogga, for research on arecanut leaf spot disease. For this purpose, new technologies were implemented in farmers' fields, and 8 demonstration trials were conducted in Shivamogga and Chikkamagaluru districts. Through this study, it has been reported that adopting Good Agricultural Practices for integrated disease management, along with timely spraying of fungicides at the community level, would help reduce fungal infection, disease severity, and its spread. In this regard, necessary awareness programmes are being takenup. |
| ಉ) | ಅಡಿಕೆ ಬೆಳೆಗೆ ಎಲೆಚುಕ್ಕಿ ರೋಗದಿಂದ ಬೆಳೆ ನಷ್ಟದಿಂದ ಪರಿಹಾರವಾಗಿ ರೈತರಿಗೆ ಸರ್ಕಾರದಿಂದ ನೆರವು ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ: (ವಿವರ ನೀಡುವುದು) | ಬೆಳೆ ನಷ್ಟವಾದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಪರಿಹಾರ ನೀಡುವ ಯೋಜನೆ ಇರುವುದಿಲ್ಲ.<br><br>Horticulture Department does not have a scheme to provide compensation for crop loss. |
| ಊ) | ಅಡಿಕೆ ಬೆಳೆಗೆ ಎಲೆಚುಕ್ಕಿ ರೋಗದಿಂದ ನಷ್ಟವಾದ ಎಷ್ಟು ರೈತರಿಗೆ ವಿಮಾ ಕಂಪನಿಗಳಿಂದ ಪರಿಹಾರ ನೀಡಲಾಗಿದೆ: ಒಂದು ಎಕರೆಗೆ ಎಷ್ಟು ಪರಿಹಾರವನ್ನು ನೀಡಲಾಗುತ್ತಿದೆ? (ತಾಲ್ಲೂಕುವಾರು ವಿವರ ನೀಡುವುದು). | ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ವಿಮಾ ಪರಿಹಾರದಲ್ಲಿ ಹವಮಾನ ವೈಪರಿತ್ಯದಿಂದ ಆಗುವ/ ಹೆಚ್ಚಾಗುವ ರೋಗಗಳಿಂದಾಗುವ ನಷ್ಟವು ಸಹ ಪರೋಕ್ಷವಾಗಿ ಒಳಗೊಂಡಿರುತ್ತದೆ. 2024-25ನೇ ಸಾಲಿನಲ್ಲಿ ಈ ಯೋಜನೆಯಡಿ ಅಡಿಕೆ ಬೆಳೆಗೆ ವಿಮಾ ಕಂಪನಿಗಳಿಂದ ಈವರೆವಿಗೆ 365920 ಅರ್ಹ ರೈತ ಪ್ರಕರಣಗಳಿಗೆ ರೂ. 47254.13 ಲಕ್ಷ ಪರಿಹಾರ ನೀಡಲಾಗಿದೆ.<br><br>ರಾಜ್ಯದಲ್ಲಿ ನೊಂದಾಯಿತ ವಿಮಾ ವಿಸ್ತೀರ್ಣದ ಒಂದು |

| | | |
|---|---|---|
| | | ಎಕರೆಗೆ ಸರಾಸರಿ ರೂ. 12768.13ರಂತೆ ಪರಿಹಾರವನ್ನು ನೀಡಲಾಗುತ್ತಿದೆ. ಟರ್ಮ್ ಶೀಟ್ ಮತ್ತು ಹವಮಾನ ಸೂಚ್ಯಂಕಗಳ ಆಧಾರದ ಮೇರೆಗೆ ಘಟಕವಾರು (ಗ್ರಾಮ ಪಂಚಾಯತ್) ವಿಮೆ ಲೆಕ್ಕಚಾರ ಮಾಡಲಾಗಿ ಪರಿಹಾರ ನೀಡಲಾಗುತ್ತದೆ. ಇದರಿಂದ ಸಹಜವಾಗಿ ಒಂದು ಗ್ರಾಮ ಪಂಚಾಯಿತಿಯ ವಿಮಾ ಪರಿಹಾರ ಮೊತ್ತವು ಇನ್ನೊಂದು ಗ್ರಾಮ ಪಂಚಾಯಿತಿಯ ವಿಮಾ ಪರಿಹಾರ ಮೊತ್ತಕ್ಕೆ ವ್ಯತ್ಯಾಸವಿರುತ್ತದೆ.<br><br>ಜಿಲ್ಲಾವಾರು ವಿಮಾ ಪರಿಹಾರ ನೀಡಲಾಗಿರುವ ರೈತ ಪ್ರಕರಣಗಳ ಸಂಖ್ಯೆ ಹಾಗೂ ತಾಲ್ಲೂಕುವಾರು ಪ್ರತಿ ಎಕರೆಗೆ ಸರಾಸರಿ ನೀಡಲಾಗಿರುವ ವಿಮಾ ಪರಿಹಾರ ಮೊತ್ತದ ವಿವರ ಅನುಬಂಧ 1 & 2 ರಲ್ಲಿ ಅನುಕ್ರಮವಾಗಿ ಒದಗಿಸಲಾಗಿದೆ.<br><br>Under the Restructured Weather-Based Crop Insurance Scheme, losses arising from or aggravated by diseases due to weather aberrations are indirectly included in the insurance compensation.<br><br>During the year 2024–25, under this scheme insurance companies have so far disbursed compensation amounting Rs. 47,254.13 lakh to 3,65,920 eligible farmer for arecanut.<br><br>Accordingly, across the State, compensation is being provided at an average rate of Rs. 12,768.13 per acre of the registered insured area. Based on the term sheet and weather indices, insurance calculations are carried out and compensation is provided unit-wise (Gram Panchayat-wise). Consequently, the insurance compensation amount of one Gram Panchayat naturally differs from that of another Gram Panchayat. The district-wise number of farmer cases that have received insurance compensation and the taluk-wise details of the average insurance compensation amount per acre are furnished in Annexures 1 and 2 respectively. |

**ಸಂಖ್ಯೆ: HORTI 26 HGM 2026**

(ಎಸ್. ಎಸ್. ಮಲ್ಲಿಕಾರ್ಜುನ್)

**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

**ಅನುಬಂಧ - 1**

(ರೂ. ಲಕ್ಷಗಳಲ್ಲಿ)

| **ಬೆಳೆ** | **ಜಿಲ್ಲೆ** | **ವಿಮಾ ಪಾರಿಹಾರ ಮೊತ್ತ (ರೂ. ಲಕ್ಷಗಳಲ್ಲಿ)** | **ವಿಮಾ ಪರಿಹಾರ ಪಡೆದ ರೈತ ಪ್ರಕರಣಗಳ ಸಂಖ್ಯೆ** |
|---|---|---|---|
| ಅಡಿಕೆ | ಚಿಕ್ಕಮಗಳೂರು | 2983.04 | 16708 |
| | ದಕ್ಷಿಣ ಕನ್ನಡ | 21334.98 | 198946 |
| | ದಾವಣಗೆರೆ | 4030.50 | 18576 |
| | ಹಾಸನ | 200.08 | 1006 |
| | ಹಾವೇರಿ | 3044.84 | 13595 |
| | ಶಿವಮೊಗ್ಗ | 10729.85 | 86109 |
| | ತುಮಕೂರು | 761.26 | 10143 |
| | ಉಡುಪಿ | 4099.85 | 20357 |
| | ವಿಜಯನಗರ | 69.74 | 480 |

| ಅನುಬಂಧ - 2 | | | | | |
|---|---|---|---|---|---|
| ಬೆಳೆ | ಜಿಲ್ಲೆ | ತಾಲ್ಲೂಕು | Taluk | ವಿಮಾ ಪರಿಹಾರ ಪಡೆದ ರೈತ ಪ್ರಕರಣಗಳ ಸಂಖ್ಯೆ | ಪ್ರತಿ ಎಕರೆಗೆ ಸರಾರಿ ವಿಮಾ ಮೊತ್ತ (ರೂ.) |
| ಅಡಿಕೆ | ಚಿಕ್ಕಮಗಳೂರು | ಅಜ್ಜಂಪುರ | AJJAMPURA | 215 | 11505.64 |
| ಅಡಿಕೆ | ಚಿಕ್ಕಮಗಳೂರು | ಚಿಕ್ಕಮಗಳೂರು | Chikkamagaluru | 132 | 167.96 |
| ಅಡಿಕೆ | ಚಿಕ್ಕಮಗಳೂರು | ಕಡೂರು | Kadur | 1281 | 21218.24 |
| ಅಡಿಕೆ | ಚಿಕ್ಕಮಗಳೂರು | ಕಳಸ | KALASA | 294 | 500.21 |
| ಅಡಿಕೆ | ಚಿಕ್ಕಮಗಳೂರು | ಕೊಪ್ಪ | Koppa | 4876 | 7545.77 |
| ಅಡಿಕೆ | ಚಿಕ್ಕಮಗಳೂರು | ಮೂಡಿಗೆರೆ | Mudigere | 4010 | 5845.65 |
| ಅಡಿಕೆ | ಚಿಕ್ಕಮಗಳೂರು | ನರಸಿಂಹರಾಜಪುರ | Narasimharajapura | 1802 | 3087.59 |
| ಅಡಿಕೆ | ಚಿಕ್ಕಮಗಳೂರು | ಶೃಂಗೇರಿ | Sringeri | 3124 | 4488.67 |
| ಅಡಿಕೆ | ಚಿಕ್ಕಮಗಳೂರು | ತರೀಕೆರೆ | Tarikere | 974 | 10856.09 |
| ಅಡಿಕೆ | ದಕ್ಷಿಣ ಕನ್ನಡ | ಬಂಟ್ವಾಳ | Bantwal | 39727 | 19509.76 |
| ಅಡಿಕೆ | ದಕ್ಷಿಣ ಕನ್ನಡ | ಬೆಳ್ತಂಗಡಿ | Belthangady | 39128 | 20484.11 |
| ಅಡಿಕೆ | ದಕ್ಷಿಣ ಕನ್ನಡ | ಕಡಬ | Kadaba | 41223 | 13969.16 |
| ಅಡಿಕೆ | ದಕ್ಷಿಣ ಕನ್ನಡ | ಮಂಗಳೂರು | Mangalore | 1299 | 21272.74 |
| ಅಡಿಕೆ | ದಕ್ಷಿಣ ಕನ್ನಡ | ಮೂಡಬಿದ್ರೆ | Mudabidre | 3837 | 34835.40 |
| ಅಡಿಕೆ | ದಕ್ಷಿಣ ಕನ್ನಡ | ಮುಲ್ಕಿ | MULKI | 173 | 26443.71 |
| ಅಡಿಕೆ | ದಕ್ಷಿಣ ಕನ್ನಡ | ಪುತ್ತೂರು | Puttur | 31503 | 10317.71 |
| ಅಡಿಕೆ | ದಕ್ಷಿಣ ಕನ್ನಡ | ಸುಳ್ಯ | Sullia | 39729 | 10488.83 |
| ಅಡಿಕೆ | ದಕ್ಷಿಣ ಕನ್ನಡ | ಉಳ್ಳಾಲ | ULLALA | 2327 | 15149.44 |
| ಅಡಿಕೆ | ದಾವಣಗೆರೆ | ಚನ್ನಗಿರಿ | Channagiri | 5067 | 7616.73 |
| ಅಡಿಕೆ | ದಾವಣಗೆರೆ | ದಾವಣಗೆರೆ | Davanagere | 4363 | 7781.42 |
| ಅಡಿಕೆ | ದಾವಣಗೆರೆ | ಹರಿಹರ | Harihar | 359 | 9251.08 |
| ಅಡಿಕೆ | ದಾವಣಗೆರೆ | ಹೊನ್ನಾಳಿ | Honnali | 2835 | 15820.66 |
| ಅಡಿಕೆ | ದಾವಣಗೆರೆ | ಜಗಳೂರು | Jagalur | 2187 | 22171.40 |
| ಅಡಿಕೆ | ದಾವಣಗೆರೆ | ನ್ಯಾಮತಿ | NYAMATI | 3765 | 18036.23 |
| ಅಡಿಕೆ | ಹಾಸನ | ಆಲೂರು | Alur | 89 | 11160.88 |
| ಅಡಿಕೆ | ಹಾಸನ | ಅರ್ಕಲಗೂಡು | Arkalgud | 157 | 23423.22 |
| ಅಡಿಕೆ | ಹಾಸನ | ಬೇಲೂರು | Belur | 150 | 15521.60 |
| ಅಡಿಕೆ | ಹಾಸನ | ಸಕಲೇಶಪುರ | Sakleshpura | 610 | 14307.77 |
| ಅಡಿಕೆ | ಹಾವೇರಿ | ಬ್ಯಾಡಗಿ | Byadagi | 408 | 25021.91 |
| ಅಡಿಕೆ | ಹಾವೇರಿ | ಹಾನಗಲ್ | Hangal | 11327 | 14969.15 |
| ಅಡಿಕೆ | ಹಾವೇರಿ | ಹಿರೇಕೆರೂರು | Hirekerur | 941 | 13615.06 |
| ಅಡಿಕೆ | ಹಾವೇರಿ | ರಟ್ಟೀಹಳ್ಳಿ | RATTEEHALLI | 626 | 13729.03 |
| ಅಡಿಕೆ | ಹಾವೇರಿ | ಶಿಗ್ಗಾಂವ್ | Shiggaon | 293 | 21829.97 |
| ಅಡಿಕೆ | ಶಿವಮೊಗ್ಗ | ಭದ್ರಾವತಿ | Bhadravathi | 3316 | 10159.25 |
| ಅಡಿಕೆ | ಶಿವಮೊಗ್ಗ | ಹೊಸನಗರ | Hosanagar | 8902 | 10346.50 |
| ಅಡಿಕೆ | ಶಿವಮೊಗ್ಗ | ಸಾಗರ | Sagar | 13179 | 9219.49 |
| ಅಡಿಕೆ | ಶಿವಮೊಗ್ಗ | ಶಿಕಾರಿಪುರ | Shikaripura | 14893 | 10223.74 |
| ಅಡಿಕೆ | ಶಿವಮೊಗ್ಗ | ಶಿವಮೊಗ್ಗ | Shivamogga | 7833 | 9587.01 |
| ಅಡಿಕೆ | ಶಿವಮೊಗ್ಗ | ಸೊರಬ | Sorab | 20476 | 10710.47 |
| ಅಡಿಕೆ | ಶಿವಮೊಗ್ಗ | ತೀರ್ಥಹಳ್ಳಿ | Thirthalli | 17510 | 14359.53 |
| ಅಡಿಕೆ | ತುಮಕೂರು | ಚಿಕ್ಕನಾಯಕನಹಳ್ಳಿ | Chiknayakanahalli | 1653 | 5023.02 |
| ಅಡಿಕೆ | ತುಮಕೂರು | ಗುಬ್ಬಿ | Gubbi | 1344 | 1148.57 |
| ಅಡಿಕೆ | ತುಮಕೂರು | ಕೊರಟಗೆರೆ | Koratagere | 129 | 1296.26 |
| ಅಡಿಕೆ | ತುಮಕೂರು | ಕುಣಿಗಲ್ | Kunigal | 55 | 1288.32 |
| ಅಡಿಕೆ | ತುಮಕೂರು | ಮಧುಗಿರಿ | Madhugiri | 136 | 334.02 |

| | | | | | |
|---|---|---|---|---|---|
| ಅಡಿಕೆ | ತುಮಕೂರು | ಪಾವಗಡ | Pavagada | 1504 | 3047.04 |
| ಅಡಿಕೆ | ತುಮಕೂರು | ಶಿರಾ | Sira | 4837 | 7382.51 |
| ಅಡಿಕೆ | ತುಮಕೂರು | ತಿಪಟೂರು | Tiptur | 71 | 2901.01 |
| ಅಡಿಕೆ | ತುಮಕೂರು | ತುಮಕೂರು | Tumakuru | 283 | 844.82 |
| ಅಡಿಕೆ | ತುಮಕೂರು | ತುರುವೇಕೆರೆ | Turuvekere | 131 | 3350.65 |
| ಅಡಿಕೆ | ಉಡುಪಿ | ಬ್ರಹ್ಮಾವರ | Brahmavara | 648 | 30473.56 |
| ಅಡಿಕೆ | ಉಡುಪಿ | ಬೈಂದೂರು | Byandur | 2767 | 34745.47 |
| ಅಡಿಕೆ | ಉಡುಪಿ | ಹೆಬ್ರಿ | HEBRI | 1176 | 29818.74 |
| ಅಡಿಕೆ | ಉಡುಪಿ | ಕಾಪು | Kaapu | 76 | 16601.75 |
| ಅಡಿಕೆ | ಉಡುಪಿ | ಕಾರ್ಕಳ | Karkala | 3472 | 32070.12 |
| ಅಡಿಕೆ | ಉಡುಪಿ | ಕುಂದಾಪುರ | Kundapura | 12118 | 36397.33 |
| ಅಡಿಕೆ | ಉಡುಪಿ | ಉಡುಪಿ | Udupi | 100 | 26065.34 |
| ಅಡಿಕೆ | ವಿಜಯನಗರ | ಹರಪನಹಳ್ಳಿ | Harapanahalli | 480 | 6056.75 |
| **ಒಟ್ಟು** | | | | **365920** | **12768.13** |

**(ಅನುಬಂಧ-3)**

**ಅಡಿಕೆ ಬೆಳೆಯ ವಿಸ್ತೀರ್ಣ**

| ಕ್ರಮ ಸಂಖ್ಯೆ Sl. No | ಜಿಲ್ಲೆಗಳು Districts | ಅಡಿಕೆ (Arecanut) | |
|---|---|---|---|
| | | ವಿಸ್ತೀರ್ಣ Area | ಉತ್ಪನ್ನ Prodn. |
| 1 | ಬೆಂಗಳೂರು (ನ) B'lore (U) | 936 | 1852 |
| 2 | ಬೆಂಗಳೂರು (ಗ್ರಾ) B'lore (R) | 4733 | 6153 |
| 3 | ಚಿಕ್ಕಬಳ್ಳಾಪುರ Chikkaballapura | 1108 | 1923 |
| 4 | ಚಿತ್ರದುರ್ಗ Chitradurga | 71118 | 113455 |
| 5 | ದಾವಣಗೆರೆ Davangere | 104785 | 191128 |
| 6 | ಕೋಲಾರ Kolar | 39 | 39 |
| 7 | ರಾಮನಗರ Ramanagara | 4560 | 4996 |
| 8 | ಶಿವಮೊಗ್ಗ Shimoga | 137420 | 200979 |
| 9 | ತುಮಕೂರು Tumakuru | 87224 | 91978 |
| 10 | ಬಾಗಲಕೋಟೆ Bagalkote | 5 | 6 |
| 11 | ಬೆಳಗಾವಿ Belagavi | 53 | 112 |
| 12 | ವಿಜಾಯಾಪುರ Vijayapura | 2.91 | 5.44 |
| 13 | ಧಾರವಾಡ Dharwad | 338 | 390 |
| 14 | ಗದಗ Gadag | 262 | 466 |
| 15 | ಹಾವೇರಿ Haveri | 22325 | 27906 |
| 16 | ಉತ್ತರ ಕನ್ನಡ U.Kannada | 37758 | 87709 |
| 17 | ಬಳ್ಳಾರಿ Ballari | 653 | 1291 |
| 18 | ಬೀದರ್ Bidar | 0 | 0 |
| 19 | ಕಲಬುರಗಿ Kalaburagi | 0 | 0 |
| 20 | ಕೊಪ್ಪಳ Koppal | 31 | 30 |
| 21 | ರಾಯಚೂರು Raichur | 0 | 0 |
| 22 | ಯಾದಗಿರಿ Yadagiri | 1 | 0.29 |
| 23 | ಚಾಮರಾಜನಗರ Chamarajanagara | 1916 | 2395 |
| 24 | ಚಿಕ್ಕಮಗಳೂರು Chikmagalore | 102177 | 136410 |

| | | | |
|---|---|---|---|
| 25 | ದಕ್ಷಿಣ ಕನ್ನಡ D. Kannada | 102107 | 137235 |
| 26 | ಹಾಸನ Hassan | 17323 | 21654 |
| 27 | ಕೊಡಗು Kodagu | 19603 | 31600 |
| 28 | ಮಂಡ್ಯ Mandya | 4576 | 5130 |
| 29 | ಮೈಸೂರು Mysuru | 5402 | 7109 |
| 30 | ಉಡುಪಿ Udupi | 24628 | 41786 |
| 31 | ವಿಜಯನಗರ Vijayanagara | 5313 | 7439 |
| **ರಾಜ್ಯದ ಮೊತ್ತ STATE TOTAL** | | **756398** | **1121177** |